# ಆ್ಯಪಲ್ ಟು ಆ್ಯಪಲ್ ಏರ್‌ಡ್ರಾಪ್ ಮಾಡಿ!




■ ಶಶಿಕುಮಾರ್ ಸಿ.

ಫೋಟೊ, ವಿಡಿಯೊ ಅಥವಾ ಬೇರೆ ಯಾವುದೇ ಫೈಲ್ ಅನ್ನು ಒಂದು ಡಿವೈಸ್‌ನಿಂದ ಮತ್ತೊಂದು ಡಿವೈಸ್‌ಗೆ ಸುಲಭವಾಗಿ ವಿನಿಮಯ ಮಾಡಲು ಯುಎಸ್‌ಬಿ ಕೇಬಲ್, ಬ್ಲೂಟೂತ್, ವಾಟ್ಸಾಪ್, ಇಮೇಲ್ ಸೇರಿದಂತೆ ಹಲವು ಆ್ಯಪ್‌ಗಳು ಇವೆ. ಫೈಲ್‌ಗಳನ್ನು ಬೇರೆಡೆ ವರ್ಗಾಯಿಸುವುದಕ್ಕೆ ವಾಟ್ಸಾಪ್, ಟೆಲಿಗ್ರಾಂನಂತಹ ಸಂದೇಶ ವಿನಿಮಯ ಆ್ಯಪ್, ಇ–ಮೇಲ್ ಹಾಗೂ ಐಟ್ಯೂನ್ ತಂತ್ರಾಂಶದ ಹೊರತಾಗಿ ಬೇರೆ ಮಾರ್ಗಗಳ ಮೂಲಕ ವಿನಿಮಯ ಪ್ರಕ್ರಿಯೆಗೆ ಐಫೋನ್ ಅವಕಾಶ ಕಲ್ಪಿಸಿಲ್ಲ.

ಆದರೆ, ಆ್ಯಪಲ್ ಕಂಪನಿಯ ಐಫೋನ್, ಐಪ್ಯಾಡ್ ಮತ್ತು ಮ್ಯಾಕ್ ಕಂಪ್ಯೂಟರ್‌ಗಳಲ್ಲಿ ಇದು ತೀರಾ ಕಷ್ಟ. ಅದಕ್ಕೆ ಕಂಪನಿ ನೀಡುವ ಕಾರಣ – ತನ್ನ ಬಳಕೆದಾರರ ಖಾಸಗಿತನದ ಸುರಕ್ಷತೆ. ತನ್ನ ಬಳಕೆದಾರರು ಎದುರಿಸುತ್ತಿರುವ ಈ ಸಮಸ್ಯೆಯನ್ನು ಅರಿತ ಐಫೋನ್ 'ಏರ್‌ಡ್ರಾಪ್' ಆ್ಯಪ್ ಅನ್ನು ಪರಿಚಯಿಸಿದ್ದು, ಇದರ ಮೂಲಕ ಸುಲಭವಾಗಿ ಒಂದು ಡಿವೈಸ್‌ನಿಂದ ಮತ್ತೊಂದು ಡಿವೈಸ್‌ಗೆ ಫೈಲ್‌ಗಳನ್ನು ರವಾನಿಸಬಹುದಾಗಿದೆ. ಹೀಗೆ ವರ್ಗಾಯಿಸುವ ವಿಧಾನಕ್ಕೂ 'ಏರ್‌ಡ್ರಾಪ್' ಎನ್ನಲಾಗುತ್ತದೆ.

ಐಒಎಸ್ (ಐಫೋನ್ ಕಾರ್ಯಾಚರಣಾ ವ್ಯವಸ್ಥೆ) ಇರುವ ಸಾಧನಗಳಲ್ಲಷ್ಟೇ ಕಾರ್ಯನಿರ್ವಹಿಸುವ 'ಏರ್‌ಡ್ರಾಪ್', ಆ್ಯಪಲ್ ಸಾಧನಗಳ ನಡುವೆ ವೈರ್ ಇಲ್ಲದೆಯೇ ಸುಲಭವಾಗಿ ಫೈಲ್‌ಗಳನ್ನು ವರ್ಗಾಯಿಸಲು ವೈರ್‌ಲೆಸ್ ಸೇತುವೆಯಾಗಿದೆ. ಯಾವುದೇ ಪ್ರತ್ಯೇಕ ತಂತ್ರಾಂಶ ಅಳವಡಿಸದೆಯೇ, ಅತ್ಯಂತ ವೇಗವಾಗಿ ಫೈಲ್ ವರ್ಗಾಯಿಸಬಹುದು. ಫೋಟೊ, ಹಾಡು, ವಿಡಿಯೊ, ವೆಬ್ ವಿಳಾಸ, ಸಂಪರ್ಕ ಸಂಖ್ಯೆ, ಪ್ಲೇ ಲಿಸ್ಟ್‌ಗಳು, ಲೊಕೇಶನ್, ಟಿಪ್ಪಣಿ ಮಾಡಿಕೊಂಡ ಪಠ್ಯವನ್ನೂ ಐಫೋನ್, ಐಪ್ಯಾಡ್, ಮ್ಯಾಕ್ ಕಂಪ್ಯೂಟರ್‌ಗಳಲ್ಲಿ 'ಏರ್‌ಡ್ರಾಪ್' ಮಾಡಬಹುದು.

ಐಫೋನ್ ಅಥವಾ ಐಪ್ಯಾಡ್‌ನ ಬಲ ಮೇಲ್ಭಾಗದ ಮೂಲೆಯಿಂದ ಕೆಳಕ್ಕೆ ಸ್ವೈಪ್ ಮಾಡಿದಾಗ ಕಂಟ್ರೋಲ್ ಸೆಂಟರ್ ತೆರೆದುಕೊಳ್ಳುತ್ತದೆ. ಅದರಲ್ಲಿ ವೈಫೈ, ಡೇಟಾ ಸಂಪರ್ಕದ ಆಯ್ಕೆಯನ್ನು ಒತ್ತಿದಾಗ 'ಏರ್‌ಡ್ರಾಪ್' ಆಯ್ಕೆಯು ಕಾಣುತ್ತದೆ. ಅದನ್ನು ಒತ್ತಿದಾಗ ಫೈಲ್ ಸ್ವೀಕರಿಸುವುದನ್ನು ಆಫ್ ಮಾಡುವ, ಸಂಪರ್ಕಗಳಿಂದ ಮಾತ್ರ ಸ್ವೀಕರಿಸುವ ಮತ್ತು ಎಲ್ಲರಿಂದಲೂ ಸ್ವೀಕರಿಸುವಂತೆ ಹೊಂದಿಸುವ ಆಯ್ಕೆ ಗೋಚರಿಸುತ್ತದೆ. ಬ್ಲೂಟೂತ್ ಬಳಸಿ ಕೆಲಸ ಮಾಡುವ ಏರ್‌ಡ್ರಾಪ್, ಆನ್ ಮಾಡಿದಾಗ ಇಂಟರ್‌ನೆಟ್ ಇಲ್ಲದೆಯೂ ಎರಡೂ ಸಾಧನಗಳ ಮಧ್ಯೆ ವೈಫೈ ಸಂಪರ್ಕ ಏರ್ಪಡುವಂತೆ ಮಾಡುತ್ತದೆ. ಬಳಿಕ ತಾನಾಗಿಯೇ ಫೈರ್‌ವಾಲ್ ರಚಿಸಿಕೊಂಡು, ಎನ್‌ಕ್ರಿಪ್ಟ್ ಆಗಿಯೇ ಫೈಲ್‌ಗಳು ಉಭಯ ಸಾಧನಗಳ ಮಧ್ಯೆ ವಿನಿಮಯವಾಗಿಸಲು ನೆರವಾಗುತ್ತವೆ.

ಫೈಲ್‌ಗಳನ್ನು ಆಯ್ಕೆ ಮಾಡಿಕೊಂಡು, ಶೇರ್ ಮಾಡುವ ಬಟನ್ ಒತ್ತಿದಾಗ, ಏರ್‌ಡ್ರಾಪ್ ಆಯ್ಕೆ ಕಾಣಿಸುತ್ತದೆ. ಫೈಲ್ ಸ್ವೀಕರಿಸಬೇಕಾದ ಸಾಧನದ ಸೆಟ್ಟಿಂಗ್ಸ್‌ನಲ್ಲಿ 'ಜನರಲ್' ಆಯ್ಕೆ ಮಾಡಿದಾಗ ಏರ್‌ಡ್ರಾಪ್ ತೆರೆದರೆ, ಎಲ್ಲರಿಂದಲೂ (Everyone) ಅಂತ ಆಯ್ಕೆ ಮಾಡಿದಾಗ, ಕಳುಹಿಸುವ ಸಾಧನದಲ್ಲಿ ಈ ಸಾಧನದ ಹೆಸರು ಕಾಣಿಸುತ್ತದೆ. ಅದನ್ನು ಒತ್ತಿದಾಗ, ಫೈಲ್ ಸ್ವೀಕರಿಸುವ ಸಾಧನದಲ್ಲಿ ಈ ಫೈಲ್ ಅನ್ನು ಪಡೆದುಕೊಳ್ಳಬೇಕೇ ಎಂದು ಕೇಳಲಾಗುತ್ತದೆ. 'ಓಕೆ' ಒತ್ತಿದಾಗ ಕ್ಷಿಪ್ರಗತಿಯಲ್ಲಿ ಫೈಲ್ ವರ್ಗಾವಣೆಯಾಗುತ್ತದೆ. ಬ್ಲೂಟೂತ್ ಸಂಪರ್ಕದ ಮೂಲಕ ವೈಫೈ ಕೂಡ ಕೆಲಸ ಮಾಡುವುದರಿಂದ ವೇಗವಾಗಿ ಫೈಲ್ ರವಾನೆಯಾಗುತ್ತದೆ. ಹೀಗಾಗಿ ದೊಡ್ಡ ಗಾತ್ರದ ಫೈಲುಗಳ ವರ್ಗಾವಣೆ ಸುಲಭ. ■




॥ ಶ್ರೀ ಗುರು ಓಂ ಶ್ರೀ ಸಾಯಿರಾಂ ॥
Indian Famous Astrologer
ಬಿಳಿಗಿರಿ ರಂಗನ ಬೆಟ್ಟದಿಂದ ನೇರ ಪರಿಹಾರ



ಓಂ ಶ್ರೀ ಸಾಯಿ ಕೊಡಂಗಲ್ಲೂರು ಭಗವತಿ ಜ್ಯೋತಿಷ್ಯರು

ಕೇರಳದ ಮಹಾಜ್ಞಾನಿ ದೈವಜ್ಞ
ಪಂ॥ ಬಿ. ಗುರುಪ್ರಸಾದ್
ಮಾತಾ ಕಾಳಿಕಾದೇವಿ ಆರಾಧಕರು

ಕೇರಳದ ಅಷ್ಟಮಂಗಲ ಪ್ರಶ್ನೆ, ಆರೋಢ ಪ್ರಶ್ನೆ, ತಾಂಬೂಲ ಪ್ರಶ್ನೆ, ದೈವ ಪ್ರಶ್ನೆ, ಕವಡೆ ಪ್ರಶ್ನೆ, ಮುಖಲಕ್ಷಣ, ಜನ್ಮದಿನಾಂಕ ನೋಡಿ ಸಂಪೂರ್ಣ ಭವಿಷ್ಯವನ್ನು ಫೋನಿನ ಮೂಲಕ ತಿಳಿಸುತ್ತಾರೆ.

ನಿಮ್ಮ ಸಮಸ್ಯೆಗಳಾದ ವಿದ್ಯೆ, ಮದುವೆ, ವಿದೇಶ ಪ್ರಯಣ, ಆರೋಗ್ಯ, ಸಂತಾನ, ಮಾಟ–ಮಂತ್ರ, ಶತ್ರುನಾಶ, ಸ್ತ್ರೀ–ಪುರುಷ ವಶೀಕರಣ, ಕೋರ್ಟ್ ಕೇಸ್ ವ್ಯಾಪಾರದಲ್ಲಿ ತೊಂದರೆ ಇನ್ನಿತರ ಗುಪ್ತ ಕಠಿಣ ಸಮಸ್ಯೆಗಳಿಗೆ ಕೇರಳದ ಶ್ರೀ ಆದಿ ದೈವಗಳಾದ, ಕೊಡಂಗಲ್ಲೂರು ಭಗವತಿ, ಮಾಂಡಂಗಾವ್ ಭಗವತಿ, ಚೋಟಾನಿಕರೆ ಭಗವತಿ, ಕಣತ್ತೂರ್ ನಾಲ್ವಾರ್ ದೈವಂ, ಶ್ರೀ ವಿಷ್ಣುಮಾಯೆ ಕುಟ್ಟಿ ಚಾತನ್ ತಪೋ ಶಕ್ತಿಯಿಂದ 3 ದಿನಗಳಲ್ಲಿ ಶಾಶ್ವತ ಪರಿಹಾರ ಮಾಡುತ್ತಾರೆ. Get your Any Problem 100% Solutions wit in 3 Days

ಯಾವುದೇ ಹಳ್ಳಿ, ತಾಲ್ಲೂಕು, ಜಿಲ್ಲೆಗಳಿಂದ ಕರೆ ಮಾಡಿದರೆ ಫೋನಿನ ಮುಖಾಂತರ ಪರಿಹಾರ ತಿಳಿಸುತ್ತಾರೆ.
ವಿ.ಸೂ: ನಮ್ಮನ್ನು ಬಿಟ್ಟು ಬೇರೆ ಯಾರಾದರೂ ಪರಿಹಾರ ಮಾಡಿಕೊಟ್ಟಲ್ಲಿ ಅವರಿಗೆ ಸೂಕ್ತ ಬಹುಮಾನ ಕೊಡಲಾಗುವುದು.
ಬೆಂಗಳೂರಿನಲ್ಲಿ ಲಭ್ಯವಿರುತ್ತಾರೆ
ನಿಮ್ಮ ಯಾವುದೇ ಸಮಸ್ಯೆ ಇದ್ದರು ಗುಪ್ತವಾಗಿ ಇಡಲಾಗುವುದು.
9972851544